**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 983/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಣಪ್ಪ | ಪ್ರಾ.ಸಾ.12 |
| ತಂದೆಯ/ಗಂಡನ ಹೆಸರು | : | ಕೆಂಚಪ್ಪ | ಚಾ.ಸಾ.8 |
| ವಯಸ್ಸು | : | 54 ವರ್ಷ | |
| ಕೆಲಸ | : | ಕೂಲಿ | ಸಾ ಪ್ರ ಬೋ |
| ವಾಸ | : | ಚಿಕ್ಕಹಳ್ಳಿ ಗ್ರಾಮ | ದಿಃ22.08.2025 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ. ಚಾಸಾ.9 ಮತ್ತು 10 ರವರು ಗೊತ್ತು. ನಾನು ಚಾಸಾ.9 ಮತ್ತು 10 ರವರ ಬಳಿ ಕೆಲಸ ಮಾಡುತ್ತಿದ್ದೆನು. ಸುಮಾರು 3 ವರ್ಷಗಳ ಹಿಂದೆ ನಾನು ಆಟೋದಲ್ಲಿ ಹೋಗುತ್ತಿದ್ದಾಗ ಅಪಘಾತ ಆಗಿ ನನ್ನ ಎಡಬುಜಕ್ಕೆ ಮತ್ತು ಎಡಗಾಲಿನ ಪಾದಕ್ಕೆ ಪೆಟ್ಟುಬಿದ್ದಿರುತ್ತದೆ. ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ಗೊತ್ತಿಲ್ಲ. ನಾನು ಹೋಗುತ್ತಿದ್ದ ಆಟೋ ಕೆಳಗೆ ಬಿದ್ದ ನಂತರ ಅಪಘಾತದ ಬಗ್ಗೆ ನನಗೆ ತಿಳಿದಿರುತ್ತದೆ. ಅಪಘಾತದ ಕುರಿತು ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಅಪಘಾತದ ನಂತರ ನನ್ನನ್ನು ಮತ್ತು ಇತರೆ ಇಬ್ಬರನ್ನು ಹೊಳಲ್ಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ದಿನಾಂಕ 23.05.2022 ರಂದು ಚಾಸಾ.11 ರವರು ನನ್ನನ್ನು, ಚಾಸಾ.1 ಮತ್ತು 9 ರವರನ್ನು ಹೊಳಲ್ಕೆರೆ ತಾಲ್ಲೂಕಿನ ಬೊಮ್ಮನಕಟ್ಟೆ ಗ್ರಾಮದ ಬಳಿ ಕಲ್ಲುಪಿಚ್ಚಿಂಗ್ ಮಾಡುವ ಕೆಲಸ ಇದೆ ಬನ್ನಿ ಎಂದು ಕರೆದಿದ್ದರು ಎಂದರೆ ಸಾಕ್ಷಿ ನಾನೇ ಕೆಲಸಕ್ಕೆ ಬಂದಿದ್ದೆನು ಎಂದು ಹೇಳುತ್ತಾರೆ. ನಮ್ಮನ್ನು ಬೊಮ್ಮನಕಟ್ಟೆ ಗ್ರಾಮದ ಸಮೀಪ ಇರುವ ಬಾಡಿಗೆ ಮನೆಯನ್ನು ತೋರಿಸಲು ಆಟೋದಲ್ಲಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ. ಚಾಸಾ.11 ಮತ್ತು

12 ರವರು ಬೈಕಿನಲ್ಲಿ ಹೋಗುತ್ತಿದ್ದು, ನಮ್ಮನ್ನು ಆಟೋದಲ್ಲಿ ಕಳುಹಿಸಿದ್ದರು ಎಂದರೆ ಸರಿ. ಚಾಸಾ.11 ಮತ್ತು 12 ರವರು ಬೈಕಿನಲ್ಲಿ ನಮ್ಮ ಆಟೋದ ಹಿಂದೆ ಬರುತ್ತಿದ್ದರು ಎಂದರೆ ಸರಿ. ನಾವು ಸಿದ್ದರಾಮಪ್ಪ ನಗರದ ಹತ್ತಿರ ಎನ್.ಹೆಚ್. ರಸ್ತೆಯಲ್ಲಿ ಆಟೋದಲ್ಲಿ ಹೋಗುತ್ತಿದ್ದಾಗ ಆರೋಪಿ ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಾವು ಹೋಗುತ್ತಿದ್ದ ಆಟೋದ ಹಿಂಬಾಗಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ. ಬಸ್ಸಿನ ಚಾಲಕ ಬಸ್ಸನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ನಮ್ಮ ಆಟೋಗೆ ಡಿಕ್ಕಿಪಡಿಸಿದ ಪರಿಣಾಮ ನಮ್ಮ ಆಟೋ ಬಿದ್ದಿತು ಎಂದರೆ ಸರಿ. ಸದರಿ ಅಪಘಾತದ ಪರಿಣಾಮ ನನ್ನ ಎಡಬುಜಕ್ಕೆ ಮತ್ತು ಪಾದಕ್ಕೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಆಟೋ ಚಾಲಕನ ಹೆಸರು ರುದ್ರಮುನಿ ಬಿನ್ ಏಕಾಂತಪ್ಪ ಎಂದು ತಿಳಿಯಿತು ಎಂದರೆ ಸರಿಯಲ್ಲ. ಚಾಸಾ.10 ರವರಿಗೂ ಸಹ ಸದರಿ ಅಪಘಾತದ ಪರಿಣಾಮ ಪೆಟ್ಟುಬಿದ್ದಿತ್ತು ಎಂದರೆ ಗೊತ್ತಿಲ್ಲ. ನಾವು ಹೋಗುತ್ತಿದ್ದ ಆಟೋದ ಸಂಖ್ಯೆ ಕೆ.ಎ.16-ಬಿ-7507 ಎಂದರೆ ಗೊತ್ತಿಲ್ಲ. ಅಪಘಾತಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ಸಿನ ನೋಂದಣಿ ಸಂಖ್ಯೆ ಕೆ.ಎ.18-ಎಫ್-0791 ಎಂದರೆ ಗೊತ್ತಿಲ್ಲ. ಆರೋಪಿತನು ಅಪಘಾತಪಡಿಸಿದ ನಂತರ ಬಸ್ಸನ್ನು ಸ್ವಲ್ಪ ದೂರ ಹೋಗಿ ನಿಲ್ಲಿಸಿರುತ್ತಾನೆ ಎಂದರೆ ಸರಿ. ಚಾಸಾ.11 ಮತ್ತು 12 ರವರು ನನಗೆ, ಚಾಸಾ.8 ಮತ್ತು 9 ರವರಿಗೆ ಹೊಳಲ್ಕೆರೆ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿ. ಅಪಘಾತವು ನ್ಯಾಯಾಲಯದ ಮುಂದಿರುವ ಆರೋಪಿತನು ಚಾಲನೆ ಮಾಡುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಕೆ.ಎ.18-ಎಫ್-0791 ಬಸ್ಸಿನ ಅತೀ ವೇಗ ಮತ್ತು ಅಜಾಗರೂಕತೆಯ ಕಾರಣ ಏರ್ಪಟ್ಟಿರುತ್ತದೆ ಎಂದರೆ ಗೊತ್ತಿಲ್ಲ. ಈ ಕುರಿತು ನಾನು ದಿನಾಂಕ 30.5.2022 ರಂದು ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ.16 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಜಿ.ಇ.ಆರ್. ವಕೀಲರಿಂದ :**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಳಲ್ಕೆರೆ